ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 21-05-1970.

*ಭಿನ್ನತೆಯನ್ನು ಅಳಿಸುವ ಯುಕ್ತಿ* (भिन्नता को मिटाने की युक्ति)

ಇಂದು ಮಕ್ಕಳ ಎರಡು ಮಾತನ್ನು ನೋಡುತ್ತಿದ್ದೇವೆ. ಆ ಎರಡು ಮಾತುಗಳು ಯಾವುದು? ಬಾಪ್ ದಾದಾ ನೋಡುವುದನ್ನೂ ನೋಡುತ್ತಿದ್ದೀರಿ, ಯಾವುದಾದರೂ ವಿಷಯವನ್ನು ಮಾತಿನಿಂದ ಯಾವ ರೀತಿ ಸ್ಪಷ್ಟವಾಗಿ ತಿಳಿದುಕೊಳ್ಳುತ್ತೀರೋ, ಅದೇ ರೀತಿ ಎಲ್ಲರ ಸಂಕಲ್ಪವನ್ನು ಸಹಜವಾಗಿ ತಿಳಿದುಕೊಳ್ಳಬಲ್ಲಿರಿ, ಈಗ ಇಂತಹ ಸ್ಥಿತಿ ಬರಲಿದೆ. ಅದು ಮಾಸ್ಟರ್ ಸರ್ವಜ್ಞ ಎಂಬ ಈ ಡಿಗ್ರಿ ಯಥಾ ಯೋಗ್ಯ, ಯಥಾ ಶಕ್ತಿಶಾಲಿಗೆ ಅವಶ್ಯ ಪ್ರಾಪ್ತಿಯಾಗುವುದು, ಪ್ರತಿಯೊಬ್ಬ ಪುರುಷಾರ್ಥಿಯ ಪುರುಷಾರ್ಥದ ಯಾವ ಅವಕಾಶ ಉಳಿದಿದೆಯೋ ಆ ಅವಕಾಶವನ್ನು ನೋಡುತ್ತಿದ್ದಾರೆ. ಎರಡನೆಯದಾಗಿ ಪ್ರತಿಯೊಬ್ಬರ ಶಕ್ತಿಯನ್ನು ನೋಡುತ್ತಿದ್ದೇವೆ. ಅವಕಾಶ ಎಷ್ಟಿದೆ ಮತ್ತು ಶಕ್ತಿ ಎಷ್ಟಿದೆ? ಎರಡಕ್ಕೂ ಪರಸ್ಪರ ಸಂಬಂಧವಿದೆ. ಎಷ್ಟು ಶಕ್ತಿಯಿದೆಯೋ ಅಷ್ಟೇ ಅವಕಾಶವೂ ಇದೆ. ಶಕ್ತಿ ಮತ್ತು ಅವಕಾಶ ಎರಡನ್ನೂ ಪ್ರತಿಯೊಬ್ಬ ಪುರುಷಾರ್ಥಿಯಲ್ಲಿ ನೋಡುತ್ತಿದ್ದೇವೆ. ಕೆಲವರು ಬಹಳ ಸಮೀಪ ಬಂದಿದ್ದಾರೆ ಮತ್ತೆ ಕೆಲವರು ಬಹಳ ದೂರದಿಂದ ಗುರಿಯನ್ನು ನೋಡುತ್ತಿದ್ದಾರೆ. ಭಿನ್ನಭಿನ್ನ ಪುರುಷಾರ್ಥಿಗಳ ಭಿನ್ನಭಿನ್ನ ಸ್ಥಿತಿ ನೋಡಿ ಏನು ಯೋಚಿಸುವಿರಿ? ಭಿನ್ನತೆಯನ್ನು ನೋಡಿ ಏನು ಯೋಚಿಸುತ್ತಿರಬಹುದು?

ಬಾಪ್ ದಾದಾ ಎಲ್ಲರನ್ನೂ ಮಾಸ್ಟರ್ ಜ್ಞಾನಪೂರ್ಣರನ್ನಾಗಿ ಮಾಡುವ ಶಿಕ್ಷಣ ಕೊಡುತ್ತಿದ್ದಾರೆ. ಪ್ರತ್ಯಕ್ಷದಲ್ಲಿ ಭಗವಂತನ ಸಾಕಾರ ಸಂಬಂಧದಲ್ಲಿ ಎಷ್ಟು ಸಮೀಪ ಬರುವಿರೋ ಅಷ್ಟು ಪುರುಷಾರ್ಥದಲ್ಲಿಯೂ ಸಮೀಪ ಬರುವಿರಿ. ತಮ್ಮ ಮತ್ತು ಬೇರೆಯವರ ಪುರುಷಾರ್ಥನನ್ನು ನೋಡಿ ಏನೆಂದು ಯೋಚಿಸುತ್ತೀರಿ? ಬೀಜವಂತು ಅವಿನಾಶಿಯಾಗಿದೆ. ಅವಿನಾಶಿ ಬೀಜಕ್ಕೆ ಸಾಂಗತ್ಯವೆಂಬ ಜಲವನ್ನು ಕೊಡಬೇಕು ಆಗ ಫಲ ಬರುವುದು. ಈಗ ಫಲ ಸ್ವರೂಪವಾಗಿ ಕಂಡು ಬರಬೇಕು, ವೃಕ್ಷದಿಂದ ಫಲವನ್ನು ಪಡೆಯುವುದಕ್ಕಾಗಿಯೇ ಪರಿಶ್ರಮ ಮಾಡುತ್ತಾರೆ. ಯಾರು ಜ್ಞಾನದ ಪಾಲನೆಯನ್ನು ಪಡೆದಿರುವರೋ ಅದರ ಫಲಿತಾಂಶದ ಫಲ ಸ್ವರೂಪವಾಗಬೇಕು. ಹಾಗಾದರೆ ಈ ಭಿನ್ನತೆಯನ್ನು ಹೇಗೆ ಅಳಿಸುವುದು? ಭಿನ್ನತೆಯನ್ನು ಅಳಿಸಲು ಸಹಜ ಉಪಾಯ ಯಾವುದು? ಈಗಿನ ಭಿನ್ನತೆ ಅಂತ್ಯದವರೆಗೂ ಇರುವುದೋ ಅಥವಾ ಅಂತರ ಬರುವುದೋ? ಸಂಪೂರ್ಣ ಸ್ಥಿತಿಯ ಪ್ರಾಪ್ತಿಯ ನಂತರ, ಈಗಿನ ಪುರುಷಾರ್ಥಿಯ ಜೀವನದ ಭಿನ್ನತೆಯಿರುವುದೇ? ಇತ್ತೀಚಿನ ಭಿನ್ನತೆಗಳನ್ನು ಏಕತೆಯಲ್ಲಿ ತರಬೇಕು. ಏಕತೆಗೆ ವರ್ತಮಾನದ ಭಿನ್ನತೆಗಳನ್ನು ಅಳಿಸಲೇಬೇಕಾಗುವುದು. ಬಾಪ್ ದಾದಾ ಈ ಭಿನ್ನತೆಗಳನ್ನು ನೋಡುತ್ತಾ ಏಕತೆಯನ್ನೇ ನೋಡುತ್ತಿದ್ದಾರೆ. ಎರಡು ಮಾತುಗಳ ಧಾರಣೆ ಏಕತೆಗೆ ಸಾಧನವಾಗಿದೆ. 1. ಏಕ್ ನಾಮಿಯಾಗಿ ಇದ್ದು ಸದಾ ಪ್ರತಿಯೊಂದು ಮಾತಿನಲ್ಲಿ ಒಬ್ಬನ ಹೆಸರನ್ನು ಉಚ್ಚರಿಸಿರಿ. 2. ಇನ್ನೊಂದು ಉಳಿತಾಯ (ಏಕಾನಾಮಿ) ಮಾಡುವವರಾಗಿರಿ, ಯಾವ ಉಳಿತಾಯ? ಸಂಕಲ್ಪಗಳ, ಸಮಯದ, ಜ್ಞಾನದ ಖಜಾನೆಗಳ ಉಳಿತಾಯಬೇಕು. ಎಲ್ಲಾ ಪ್ರಕಾರದ ಉಳಿತಾಯವನ್ನು ಕಲಿತಾಗ ಏನಾಗುವುದು? ಆಗ "ನಾನು" ಎನ್ನುವ ಎಲ್ಲ ಭಿನ್ನತೆಗಳು ತಂದೆಯಲ್ಲಿ ಸಮಾವೇಶಗೊಳ್ಳುವವು. ಒಬ್ಬನಲ್ಲಿ ಸಮಾವೇಶಗೊಳ್ಳುವ ಶಕ್ತಿ ಇರಬೇಕು. ಈ ಪುರುಷಾರ್ಥ ಕಡಿಮೆಯಿದ್ದರೆ ಅದನ್ನು ಹೆಚ್ಚಿಸಿಕೊಳ್ಳಬೇಕು. ಯಾವುದೇ ಕಾರ್ಯವಿದ್ದಾಗ ಅದರಲ್ಲಿ ನನ್ನತನವಿರಬಾರದು. ಒಂದೇ ಹೆಸರು ಇರಲಿ, ಆಗ ಏನಾಗುವುದು? ಬಾಬಾ ಎಂದು ಹೇಳುವುದರಿಂದ ಮಾಯೆ ಓಡಿಹೋಗುವುದು. ನಾನು ನಾನು ಎಂದು ಹೇಳುವುದರಿಂದ ಮಾಯೆಯ ಪೆಟ್ಟು ಬೀಳುವುದು. ಆದ್ದರಿಂದ ಭಾಷೆಯನ್ನು ಬದಲಿಸಿಕೊಳ್ಳಿ ಎಂದು ಮೊದಲೂ ಹೇಳಿದ್ದೆವು. ಬಾಬಾ ಬಾಬಾ ಎನ್ನುವ ಗುರಾಣಿ(ಢಾಲು) ಸದಾ ತಮ್ಮ ಜೊತೆಗಿಟ್ಟುಕೊಳ್ಳಿ. ಈ ಗುರಾಣಿಯಿಂದ ಯಾವುದೇ ವಿಘ್ನಗಳಿರಲಿ ಅವು ನಾಶವಾಗುವವು. ಜೊತೆಜೊತೆಗೆ ಉಳಿತಾಯ ಮಾಡುವುದರಿಂದ ವ್ಯರ್ಥ ಸಂಕಲ್ಪಗಳಿರುವುದಿಲ್ಲ ಮತ್ತು ಅವುಗಳ ಸಂಘರ್ಷವಿರುವುದಿಲ್ಲ. ಇದಾಗಿದೆ ಸ್ಪಷ್ಟೀಕರಣ. ಒಳ್ಳೆಯದು.

ಯಾರಾದರೂ, ಎಲ್ಲಿಂದಲಾದರೂ ಹೋಗುವುದಿದ್ದರೆ ಅಲ್ಲಿ ತಮ್ಮ ಏನಾದರೂ ಸ್ಮೃತಿ ಚಿಹ್ನೆಯನ್ನು ಕೊಟ್ಟು ಹೋಗುತ್ತಾರೆ. ಹಾಗಾದರೆ ಹೋಗುವವರೆಲ್ಲರೂ ಏನಾದರೂ ವಿಶೇಷ ಸ್ಮೃತಿ ಚಿಹ್ನೆಯನ್ನು ಕೊಟ್ಟು ಹೋಗಿ.

ಸರಳ ನೆನಪು ಯಾರಿಗೆ ಇರುತ್ತದೆ ಗೊತ್ತಿದೆಯೇ? ಯಾರು ಎಷ್ಟು ಸರಳವಾಗಿದ್ದಾರೆಯೋ ಅಷ್ಟು ನೆನಪು ಸರಳವಾಗಿರುತ್ತದೆ. ತಮ್ಮಲ್ಲಿ ಸರಳತೆಯ ಕೊರತೆಯ ಕಾರಣ ನೆನಪೂ ಸರಳವಾಗಿರುವುದಿಲ್ಲ. ಸರಳ ಚಿತ್ತರಾಗಿರಲು ಯಾರಿಗೆ ಸಾಧ್ಯ? ಯಾರು ಎಷ್ಟು ಪ್ರತಿಯೊಂದು ಮಾತಿನಲ್ಲಿ ಸ್ಪಷ್ಟವಾಗಿರುವರೋ ಎಂದರೆ ಸ್ವಚ್ಛವಾಗಿರುವರೋ ಅಷ್ಟು ಸರಳವಾಗಿರುವರು. ಎಷ್ಟು ಸರಳವೋ ಅಷ್ಟು ಸರಳ ನೆನಪೂ ಇರುವುದು ಮತ್ತು ಬೇರೆಯವರನ್ನು ಸರಳ ಪುರುಷಾರ್ಥಿಗಳನ್ನಾಗಿ ಮಾಡಬಹುದು. ಯಾರು ಸ್ವಯಂ ಹೇಗಿದ್ದಾರೆಯೋ ಹಾಗೆಯೇ ಅವರ ರಚನೆಯಲ್ಲಿಯೂ ಅವೇ ಸಂಸ್ಕಾರಗಳಿರುತ್ತವೆ. ಆದ್ದರಿಂದ ಪ್ರತಿಯೊಬ್ಬರಿಗೂ ತಮ್ಮ ವಿಶೇಷ ಸ್ಮೃತಿಚಿಹ್ನೆಯನ್ನು ಕೊಟ್ಟು ಹೋಗಬೇಕಾಗಿದೆ.

ಅವ್ಯಕ್ತ ಮುರಳಿ 21-05-1970.

***ಭಿನ್ನತೆಯನ್ನು ತೊಲಗಿಸುವ ಯುಕ್ತಿಗಳು***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಆನಂದ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

**1. ನಾನು ಇತರರ ಸಂಕಲ್ಪಗಳನ್ನೂ ತಿಳಿಯಬಲ್ಲ "ಮಾಸ್ಟರ್ ಸರ್ವಜ್ಞನು" ಎಂಬ ಪದವಿಯನ್ನು ಹೊಂದಿದ್ದೇನೆ.**

**2. ನಾನು ಪ್ರತ್ಯಕ್ಷದಲ್ಲಿ ಶಿವ ತಂದೆಗೆ ಸಮೀಪ ಬಂದು ಪುರುಷಾರ್ಥದಲ್ಲಿ ಕೂಡ ಬಾಬಾರವರ ಸಮೀಪಕ್ಕೆ ಬಂದಿದ್ದೇನೆ.**

**3. ನಾನು ಅವಿನಾಶಿ ಬೀಜಕ್ಕೆ ಸಾಂಗತ್ಯ ಎಂಬ ನೀರನ್ನು ಹಾಕಿ, ಜ್ಞಾನದ ಪಾಲನೆಯನ್ನು ಪಡೆದಿರುವ ಫಲ ಸ್ವರೂಪ.**

**4. ನಾನು 'ಏಕ್ ನಾಮಿ' (ಒಬ್ಬರ ಹೆಸರನ್ನು ಪ್ರತ್ಯಕ್ಷ ಮಾಡುವುದು) ಮತ್ತು ಎಕಾನಮಿಯಿಂದ (ಸಂಕಲ್ಪಗಳನ್ನು, ಸರ್ವ ಖಜಾನೆಗಳನ್ನು ಉಳಿತಾಯ ಮಾಡುವುದು) ಭಿನ್ನತೆಯನ್ನು ತೊಲಗಿಸಿ ಏಕತೆಯಲ್ಲಿ ಇದ್ದೇನೆ.**

**5. ನಾನು ಎಂಬ ಮಾತನ್ನು ಸಮಾಪ್ತಿ ಮಾಡಿ ಬಾಬಾ ಎಂಬ ಮಾತನ್ನು ಜೊತೆಗಿಟ್ಟುಕೊಂಡ ವಿಘ್ನ ವಿನಾಶಕ ಸ್ವರೂಪ.**

**6. ನಾನು ಸರಳವಾಗಿ, ಸ್ಪಷ್ಟವಾಗಿ ಅರ್ಥಾತ್ ಸ್ವಚ್ಛವಾಗಿ ಇರುತ್ತಾ ಇತರರನ್ನು ಕೂಡ ಸಹಜ ಪುರುಷಾರ್ಥಿಯನ್ನಾಗಿ ಮಾಡಿದ್ದೇನೆ.**